# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 1216/2015

| | | |
|---|---|---|
| ಸಾಕ್ಷಿಯ ಹೆಸರು | ಃ ಬಿ.ಎನ್. ಜಯಕುಮಾರ್ | ಸಿ.ಡಬ್ಲ್ಯೂ ಃ 6 |
| ತಂದೆ ಹೆಸರು | ಃ ಲೇಟ್ ನರಸಿಂಹಶೆಟ್ಟಿ | ಪಿ.ಡಬ್ಲ್ಯೂ ಃ 5 |
| ವಯಸ್ಸು | ಃ 70 ವರ್ಷ | ಪ್ರಮಾಣೀಕರಿಸಿದ ದಿಃ 13/12/2022 |
| ವೃತ್ತಿ | ಃ ರೈಸ್ ಮಿಲ್ ಮಾಲೀಕರು | |
| ವಾಸ | ಃ ಹೊಳೆನರಸೀಪುರ | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ಖಾತೆ ನಂಬರ್ 965/898 ಗೆ ಸಂಬಂಧಿಸಿದಂತೆ ನಾನು ಮಾಲೀಕರಾಗಿರುತ್ತೇನೆ. ನಾನು ಎಂ.ಎಸ್.ಐ. ರವರಿಗೆ 2010 ರಿಂದ ದಿನಾಂಕಃ 30.06.2015 ರವರೆಗೆ 4000 ಮಾಸಿಕ ಬಾಡಿಗೆಗೆ ಕೊಟ್ಟಿರುತ್ತೇನೆ. ದಿನಾಂಕಃ 15.11.2014 ರಲ್ಲಿ ಎಂ.ಎಸ್.ಐ ಬಿಲ್ಡಿಂಗ್ ಹಿಂಭಾಗ ಗೋಡೆ ಹೊಡೆದು 2 ಲಕ್ಷದ 64 ಸಾವಿರ ಮೌಲ್ಯದ ಮದ್ಯವನ್ನು ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. 16.11.2014 ರಲ್ಲಿ ಬೆಳಿಗ್ಗೆ ನೋಡಿದಾಗಾ ಸದರಿ ಎಂ.ಎಸ್.ಐ. ನಲ್ಲಿ ಕಳ್ಳತನವಾದ ಬಗ್ಗೆ ಗೊತ್ತಾಯಿತು. ದಿನಾಂಕಃ 17.02.2015 ಕ್ಕೆ ಆರೋಪಿಗಳನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ನಂತರ ದಿನಾಂಕಃ 18.04.2015 ರಂದು ಪೋಲೀಸರು ನಮ್ಮ ಬಳಿ ಹೇಳಿಕೆಯನ್ನು ಪಡೆದಿರುತ್ತಾರೆ. ಈ ಪ್ರಕರಣದಲ್ಲಿ ದಿನೇಶ್, ಮಧು, ರಾಧಕೃಷ್ಣ, ಕುಮಾರ್ ಆರೋಪಿಗಳು ಆಗಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರುಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ 1 ಮತ್ತು 3 ನೇ ಆರೋಪಿ ಪರ ವಕೀಲರಾದ ಶ್ರೀ ಬಿ.ಹೆಚ್.ವಿ. ವಕೀಲರಿಂದಃ

ನನ್ನ ಮನೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಹಾಗೂ ಎಂ.ಎಸ್.ಐ.ರವರು ಮಧ್ಯೆ ನಡೆದ ಕರಾರುಪತ್ರವಾಗಿರುತ್ತದೆ ಸದರಿ ಬಾಡಿಗೆ ಕರಾರು ದಿನಾಂಕಃ 01.06.2010 ರಿಂದ ಐದು ವರ್ಷಗಳವರೆಗೆ ಆಗಿರುತ್ತದೆ. ಕಳ್ಳತನವಾದ ದಿನ ನಾನು ನಮ್ಮ ರೈಸ್ ಮಿಲ್ ನಲ್ಲಿ ಇರುತ್ತೇವೆ. ನಮ್ಮ ಮನೆಗೂ, ಕಳ್ಳತನವಾದ ಜಾಗಕ್ಕೂ ಸುಮಾರು 200-300 ಅಡಿ ಅಂತರ ಇರುತ್ತದೆ. ನಮ್ಮ ರೈಸ್ ಮಿಲ್ ಮತ್ತು ಈ ಅಂಗಡಿ ಇರುವುದರಿಂದ ವಿದ್ಯುತ್ ದೀಪದ ವ್ಯವಸ್ಥೆ ಇದೆ ಎಂದರೆ ಸರಿ. ಸಾಮಾನ್ಯವಾಗಿ ಓಡಾಡುವ ವ್ಯಕ್ತಿಗಳು ಕಾಣುತ್ತಾರೆ ಎಂದರೆ ಸರಿ. ಎಂ.ಎಸ್.ಐ. ಆಗಲೀ ಅಥವಾ ರೈಸ್ ಮಿಲ್ ಗಾಗಲೀ ಸಿ.ಸಿ. ಕ್ಯಾಮರ ಅಳವಡಿಸಿರುವುದಿಲ್ಲ. ಸದರಿ ಅಂಗಡಿಯ ಸಿಟಿಯ ಮಧ್ಯ ಭಾಗ ಇರುವುದರಿಂದ ರಾತ್ರಿಯ ಸಮಯದಲ್ಲಿ ಗಸ್ತು ಮಾಡುತ್ತಾರೆ ಎಂದರೆ ಸರಿ. ನಮ್ಮ ರೈಸ್ ಮಿಲ್ ಸಂಜೆ 06.00 ಗಂಟೆಯವರೆಗೆ ಚಾಲ್ತಿಯಲ್ಲಿ ಇರುತ್ತದೆ. ನಮ್ಮ ರೈಸ್ ಮಿಲ್ ನ ಕಾರ್ಮಿಕರು ಕೆಲಸ ಮುಗಿದ ನಂತರ ಊರಿಗೆ ಹೋಗುತ್ತಾರೆ.

ನನಗೆ ಆರೋಪಿತರುಗಳ ಹೆಸರುಗಳನ್ನು ಪೋಲೀಸರು ತಿಳಿಸಿರುತ್ತಾರೆ. ಆರೋಪಿಗಳು ಗುರುತಿಸುವಿಕೆಯ ಬಗ್ಗೆ ಯಾವುದೇ ದಾಖಲೆಗಳನ್ನು ತೋರಿಸಿರುವುದಿಲ್ಲ. ನಾನು ಹೇಳಿಕೆಯನ್ನು ಪೋಲೀಸರಿಗೆ ಪೋಲೀಸ್ ಠಾಣೆಯಲ್ಲಿ ನೀಡಿರುತ್ತೇನೆ. ನಮ್ಮ ಎಂ.ಎಸ್.ಐ. ಅಂಗಡಿಯಲ್ಲಿ ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಜೊತೆ ಶಾಮೀಲ್ ಆಗಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಯಾವ ಮಾಲ್ ಗಳಿಗೆ ಎಷ್ಟೇಷ್ಟು ಮೌಲ್ಯ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಎಂ.ಎಸ್.ಐ. ಅಂಗಡಿ ಬೆಳಿಗ್ಗೆ ಒಪನ್ ಮಾಡಿದ ನಂತರ ಸದರಿ ವಿಚಾರ ಗೊತ್ತಿರುತ್ತದೆ. ನಾನು ಎಂ.ಎಸ್.ಐ. ಜೊತೆ ಶಾಮಿಲ್ ಆಗಿ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಎಸ್.ಐ. ನಲ್ಲಿ ಮೂರು ಜನ ಸಿಬ್ಬಂದಿಗಳು ಇದ್ದರು.

(ಮೇಲಿನ ಪಾಟೀ ಸವಾಲನ್ನು, ಉಳಿದ ಆರೋಪಿತರ ಪರ ವಕೀಲರುಗಳು ತಮ್ಮ ಪಾಟೀ ಸವಾಲಾಗಿ ಅಳವಡಿಸಿಕೊಂಡಿರುತ್ತಾರೆ.)

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ